# ಫರ್ಹಾ ತಪರಾಕಿ!



ನಟಿ, ನಿರ್ದೇಶಕಿ ಫರ್ಹಾ ಖಾನ್ ಸಿಟ್ಟಿಗೆದ್ದಿದ್ದಾರೆ. ಯಾರ ಮೇಲೆ? ಬಾಲಿವುಡ್ ಸೆಲೆಬ್ರೆಟಿಗಳ ಮೇಲೆಯೇ ಅವರು ಕಿಡಿಕಾರಿದ್ದಾರೆ. ಎಲ್ಲರೂ ಕೊರೊನಾ ವೈರಸ್ ಕಾರಣದಿಂದ ತೆಪ್ಪಗೆ ಮನೆಯಲ್ಲಿರುವಾಗ ಸಿಟ್ಟಿಗೇಳುವಂಥದ್ದು ಏನಾಗಿದೆ ಎಂದು ಕೇಳುತ್ತೀರಾ? ಮನೆಯಲ್ಲಿ ತೆಪ್ಪಗೆ ಕೂರುತ್ತಿಲ್ಲ ಎನ್ನುವುದೇ ಸಿಟ್ಟಿಗೆ ಕಾರಣ!

ಇಡೀ ದೇಶವೇ ಲಾಕ್‌ಡೌನ್ ಆಗಿರುವುದು ಗೊತ್ತಿದ್ದೇ ಇದೆ. ಮನೆಯಲ್ಲಿ ಖಾಲಿ ಕೂರಲಾಗದೆ ಜನರೆಲ್ಲ ಸೋಷಿಯಲ್ ಮೀಡಿಯಾದಲ್ಲಿ ಒಮ್ಮಿಂದೊಮ್ಮೆಲೇ ಆ್ಯಕ್ಟೀವ್ ಆಗಿದ್ದಾರೆ. ಸಾಮಾನ್ಯ ಜನರಷ್ಟೇ ಅಲ್ಲ, ಸೆಲೆಬ್ರಿಟಿಗಳೂ ಸೋಷಿಯಲ್ ಮೀಡಿಯಾಗಳಲ್ಲಿ ಬಗೆಬಗೆಯ ವಿಡಿಯೊಗಳನ್ನು ಪೋಸ್ಟ್ ಮಾಡುತ್ತಿದ್ದಾರೆ. ಬಾಲಿವುಡ್‌ನ ಹಲವು ಸ್ಟಾರ್‌ಗಳು ಮನೆಯಲ್ಲಿ ವರ್ಕ್‌ಔಟ್ ಮಾಡುತ್ತಿರುವ ವಿಡಿಯೊಗಳನ್ನು ನಿರಂತರವಾಗಿ ಅಪ್‌ಲೋಡ್ ಮಾಡುತ್ತಿದ್ದಾರೆ. ಇದೇ ಫರ್ಹಾ ಕೋಪಕ್ಕೆ ಕಾರಣ! ವರ್ಕ್‌ಔಟ್ ವಿಡಿಯೊ ಅಪ್‌ಲೋಡ್ ಮಾಡುತ್ತಿರುವವರಿಗೆ ಸೋಷಿಯಲ್ ಮೀಡಿಯಾದಲ್ಲಿಯೇ ಅವರು ಕಿವಿಹಿಂಡಿದ್ದಾರೆ.

'ಬಸ್ ಕರೋ ಯೇ ವರ್ಕ್ ಔಟ್ ವಿಡಿಯೊ' (ಈ ವರ್ಕ್‌ಔಟ್ ವಿಡಿಯೊಗಳನ್ನು ನಿಲ್ಲಿಸಿ) ಎಂದು ಅವರು ಗರ್ಜಿಸಿದ್ದಾರೆ. 'ಎಲ್ಲ ಸೆಲೆಬ್ರಿಟಿ ಮತ್ತು ಸ್ಟಾರ್‌ಗಳಿಗೆ ನನ್ನ ವಿನಯಪೂರ್ವಕ ವಿನಂತಿ. ದಯವಿಟ್ಟು ನೀವು ವರ್ಕ್‌ಔಟ್ ವಿಡಿಯೊಗಳನ್ನು ಅಪ್‌ಲೋಡ್ ಮಾಡುವುದನ್ನು ನಿಲ್ಲಿಸಿ. ನನಗೆ ಗೊತ್ತು ನೀವು ಅನುಕೂಲಸ್ಥರು. ಇಡೀ ಜಗತ್ತು ಸಾಂಕ್ರಾಮಿಕ ಕಾಯಿಲೆಯಿಂದ ನರಳುತ್ತಿರುವಾಗ, ನಿಮಗೆ ನಿಮ್ಮ ಫಿಗರ್ ಕಾಪಾಡಿಕೊಳ್ಳುವುದನ್ನು ಬಿಟ್ಟರೆ ಬೇರೆ ಯಾವ ಚಿಂತೆಯೂ ಇಲ್ಲ ಎನ್ನುವುದೂ ನನಗೆ ತಿಳಿದಿದೆ. ಆದರೆ ನಾವೊಂದಿಷ್ಟು ಜನ, ಒಂದಿಷ್ಟಲ್ಲ, ಬಹುತೇಕ ಜನರಿಗೆ ಈ ಸಂಕಷ್ಟದ ಸಂದರ್ಭದಲ್ಲಿ ಇರುವ ಕಾಳಜಿಗಳೇ ಬೇರೆ' ಎಂದು ಅವರು ಮೆದುವಾದ ಮಾತಿನಲ್ಲಿಯೇ ಹರಿತವಾಗಿ ಚುಚ್ಚಿದ್ದಾರೆ.

'ಒಂದೊಮ್ಮೆ ನೀವು ನಿಲ್ಲಿಸುವುದು ಅಸಾಧ್ಯ ಎಂದಾದರೆ ನಾನು ಸೋಷಿಯಲ್ ಮೀಡಿಯಾದಲ್ಲಿ ನಿಮ್ಮನ್ನು ಅನ್‌ಫಾಲೋ ಮಾಡಿದರೆ ಬೇಜಾರು ಮಾಡಿಕೊಳ್ಳಬೇಡಿ' ಎಂದು ಅವರು ಕಿವಿಹಿಂಡಿದ್ದಾರೆ.

ಅದಿತಿ ರಾವ್ ಹೈದರಿ, ಕರನ್ ಜೋಹರ್, ತಬು ಸೇರಿದಂತೆ ಹಲವರು ಫರ್ಹಾ ಅವರ ಈ ಮಾತನ್ನು ಬೆಂಬಲಿಸಿದ್ದಾರೆ.



# ಅಲಯಾ ಪರಿತಾಪ

'ಊರಿಗೆಲ್ಲ ಒಂದು ಚಿಂತೆಯಾದರೆ ಪೋರಿಗೆ ಇನ್ನೊಂದೇ ಚಿಂತೆ' ಎಂಬ ಗಾದೆ ನಮ್ಮ ಹಳ್ಳಿಗಳಲ್ಲಿ ಜನಜನಿತ. ಬಾಲಿವುಡ್ ಉದಯೋನ್ಮುಖ ನಟಿ ಅಲಯಾ ಅವರಿಗೆ ಈ ಮಾತು ಚೆನ್ನಾಗಿ ಒಪ್ಪುತ್ತದೆ. ದೇಶವಿಡೀ ಕೊರೊನಾ ವೈರಸ್ ದಾಳಿಯಿಂದ ತತ್ತರಿಸುತ್ತಿದೆ. ಜನರು ಜೀವಭಯದಿಂದ ಕಂಗಾಲಾಗಿದ್ದರೆ ಅಲಯಾ ಮಾತ್ರ ಬೇರೆಯದದೇ ಚಿಂತೆಯಿಂದ ಪರಿತಪಿಸುತ್ತಿದ್ದಾರೆ. ಅವರ ಚಿಂತೆ ಏನು ಗೊತ್ತೇ? 'ದೇಶ 21 ದಿನಗಳ ಕಾಲ ಲಾಕ್‌ಡೌನ್ ಆಗಿರುವುದರಿಂದ ನನ್ನ ಕಥಕ್ ಕ್ಲಾಸ್‌ಗಳು ಮಿಸ್ ಆಗುತ್ತಿವೆ' ಎನ್ನುವುದು!

ದೇಶದಲ್ಲಿ ಎಲ್ಲರೂ, ಜನಜೀವನ ಸಹಜ ಸ್ಥಿತಿಗೆ ಮರಳುವುದು ಯಾವಾಗ ಎಂದು ಯೋಚಿಸುತ್ತಿದ್ದರೆ ಅಲಿಯಾ 'ನಾನು ಮತ್ತೆ ಕಥಕ್ ಕ್ಲಾಸ್‌ಗೆ ಹೋಗುವುದು ಯಾವಾಗ?' ಎಂದು ಮರುಗುತ್ತಿದ್ದಾರೆ.

'ನಾನು ಮರಳಿ ಕಥಕ್ ಕ್ಲಾಸಿಗೆ ಹೋಗಲು ಸಾಧ್ಯವಾಗುತ್ತದೆ ಎಂದು ಆಶಿಸುತ್ತೇನೆ. ಹಾಗೆಯೇ ಕಥಕ್‌ನಲ್ಲಿ ಗಿರಗಿಟ್ಲೆ ಹಾಕುವಾಗ ಎರಡೂ ಪಾದಗಳನ್ನು ಒಟ್ಟಿಗೇ ಜೋಡಿಸಿಕೊಂಡಿರುವುದನ್ನು ಕಲಿಯುತ್ತೇನೆ ಎಂಬ ನಂಬಿಕೆ ಇದೆ' ಎಂದು ಹೇಳಿಕೊಂಡು ಅವರು ಸೋಷಿಯಲ್ ಮೀಡಿಯಾದಲ್ಲಿ ವಿಡಿಯೊ ಮಾಡಿ ಹಾಕಿದ್ದಾರೆ. ಜೊತೆಗೆ ಕಥಕ್ ನೃತ್ಯದ ಕೆಲವು ಸ್ಟೆಪ್‌ಗಳನ್ನೂ ಮಾಡಿ ತೋರಿಸಿದ್ದಾರೆ.